ದಿ.13.07.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದರರ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ನಿಪಿ-11 ಪಂಚಾಯ್ತಿ ಪಾರಿಖತ್ತುಗಳಲ್ಲಿ ನಾನು 05 ನೇ ಸಾಕ್ಷಿದಾರನಾಗಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-11(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.22.07.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ.**

1. ನನಗೆ ಬಸವರಾಜಪ್ಪ ಮತ್ತು ಅವರ ಅಣ್ಣ ರುದ್ರಪ್ಪನವರ ಕುಟುಂಬದ ಬಗ್ಗೆ ನನಗೆ ತಿಳುವಳಿಕೆ ಬಂದಾಗಿನಿಂದಲ್ಲೂ ಪರಿಚಯವಿರುತ್ತದೆ. ಬಸವರಾಜಪ್ಪ ಮತ್ತು ಅವರ ಅಣ್ಣ ರುದ್ರಪ್ಪನವರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರು. ರುದ್ರಪ್ಪನವರು ಮೊದಲು ಭತ್ತದ ವ್ಯಾಪಾರವನ್ನು ಮಾಡುತ್ತಿದ್ದರು, ಆನಂತರ ಬಸವರಾಜಪ್ಪ ಮತ್ತು ರುದ್ರಪ್ಪನವರ ಮಕ್ಕಳು ಭತ್ತದ ವ್ಯಾಪಾರವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ರುದ್ರಪ್ಪನವರು ಜಮೀನಿನ ವ್ಯವಹಾರವನುಷ್ಣ ನೋಡಿಕೊಳ್ಳುತ್ತಿದ್ದರು ಮತ್ತು ಬಸವರಾಜಪ್ಪ ಮತ್ತು ರುದ್ರಪ್ಪನ ಮಕ್ಕಳು ಭತ್ತದ ವ್ಯಾಪಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಿಗೆ ವ್ಯವಸಾಯ ಮತ್ತು ಭತ್ತದ ವ್ಯಾಪಾರ ಮಾಡುತ್ತಿದ್ದರು ಎಂದು ಹೇಳುತ್ತಾರೆ.

2. ರುದ್ರಪ್ಪ ಮತ್ತು ಬಸವರಾಜಪ್ಪನವರ ಒಟ್ಟು ಕುಟುಂಬದ ವ್ಯವಹಾರದ ಬಗ್ಗೆ ನಿಮಗೇನಾದರೂ ಗೊತ್ತಾ ಎಂದರೆ ಸಾಕ್ಷಿಯು ಅವರು ವ್ಯಾಪಾರ ಮಾಡುತ್ತಿದ್ದರು ಅದನ್ನು ಬಿಟ್ಟು ನನಗೇನು ಗೊತ್ತಿಲ್ಲ ಎಂದು ಹೇಳುತ್ತಾರೆ. ರುದ್ರಪ್ಪನವರಿಗೆ ಇಬ್ಬರು ಗಂಡು ಮಕ್ಕಳು. ರುದ್ರಪ್ಪನವರ ಒಬ್ಬ ಮಗ ಮೃತಪಟ್ಟು 20 ವರ್ಷವಾಗಿರಬಹದು. ರುದ್ರಪ್ಪ ಮತ್ತು ಬಸವರಾಜಪ್ಪನವರ ಒಟ್ಟು ಕುಟುಂಬದ ಜಮೀನುಗಳ ಖರೀದಿ ಮತ್ತು ಮಾರಾಟದ

ವ್ಯವಹಾರದಲ್ಲಿ ಭಾಗವಹಿಸಿದ್ದೀರಾ ಎಂದರೆ ಸಾಕ್ಷಿಯು ಒಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ಭಾಗವಹಿಸಿದ್ದೆ ಎಂದು ಹೇಳಿತ್ತಾರೆ.

**3.** ರುದ್ರಪ್ಪ ಮತ್ತು ಬಸವರಾಜಪ್ಪನವರ ಸಹಿಗಳನ್ನು ನಾನು ನೋಡಿರುವುದಿಲ್ಲ. ನಮ್ಮ ಊರಿನಲ್ಲಿ ಪಂಚಾಯ್ತಿ ಮಾಡಿದರೆ ಊರಿನಲ್ಲಿರುವ ಬುದ್ದಿವಂತರು ಅದನ್ನೆಲ್ಲಾ ಬರವಣಿಗೆ ಮಾಡುತ್ತಾರೆಂದು ಹೇಳುತ್ತಾರೆ. ನಮ್ಮ ಊರಿನಲ್ಲಿ ಏನೇದಾರು ಪಂಚಾಯ್ತಿ ಆದರೆ ಕರಿಬಸಪ್ಪನವರು ಪತ್ರ ಬರವಣಿಗೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಬರವಣಿಗೆ ಬರುವವರೇಲ್ಲರೂ ಬರವಣಿಗೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ರುದ್ರಪ್ಪ ಮತ್ತು ಬಸವರಾಜಪ್ಪನವರ ನಡುವೆಯಾದಂತಹ ಪಂಚಾಯ್ತಿಯಲ್ಲಿ ನಾನು ಭಾಗವಹಿಸಿದ್ದೆ. ಸದರಿ ಪಂಚಾಯ್ತಿಯಲ್ಲಿ ರುದ್ರಪ್ಪನವರ ಮಗ ಮತ್ತು ಬಸವರಾಜಪ್ಪನವರ ಮಗಳು ಭಾವಹಿಸಿದ್ದರು. ಪಂಚಾಯ್ತಿಯಲ್ಲಿ ಬರದಂತಹ ಪತ್ರಕ್ಕೆ ರುದ್ರಪ್ಪನವರ ಮಗ ಮತ್ತು ಬಸವರಾಜಪ್ಪನವರ ಮಗಳು ಇಬ್ಬರು ಸಹಿ ಮಾಡಿರುವುದಿಲ್ಲ. ಪಂಚಾಯ್ತಿಯಲ್ಲಿ ಬರದಂತಹ ಪತ್ರಕ್ಕೆ ರುದ್ರಪ್ಪನವರ ಮಗ ಮತ್ತು ಬಸವರಾಜಪ್ಪನವರ ಮಗಳು ಯಾವ ಕಾರಣಕ್ಕೆ ಸಹಿಗಳನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪಂಚಾಯ್ತಿ ಮಾಡಿದವರು ಪಂಚಾಯ್ತಿಯಲ್ಲಿ ಬರದಂತಹ ಪತ್ರಕ್ಕೆ ರುದ್ರಪ್ಪನವರ ಮಗ ಮತ್ತು ಬಸವರಾಜಪ್ಪನವರ ಮಗಳಿಗೆ ಸಹಿ ಮಾಡುವಂತೆ ಯಾರು ಹೇಳಿರುವುದಿಲ್ಲ. ಕುಟುಂಬದ ಸದಸ್ಯರಿಗೆಲ್ಲರಿಗೂ ಒಪ್ಪಿಗೆ ಇದ್ದಿದರಿಂದ ಕುಟುಂಬದ ಎಲ್ಲಾ ಸದಸ್ಯರ ಸಹಿಯಾಕಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಆ, ದಿವಸ ಪಂಚಾಯ್ತಿ ಸಂಪೂರ್ಣವಾದ ನಂತರ ಬರವಣಿಗೆ ಮಾಡಿರುತ್ತಾರೆ. ರುದ್ರಪ್ಪನವರ ಮತ್ತು ಬಸವರಾಜಪ್ಪನವರ ಮನೆಯಲ್ಲಿ ಪತ್ರಬರವಣಿಗೆ ಮಾಡಿರುತ್ತಾರೆ. ಪತ್ರವನ್ನು ಯಾರು ಬರೆದಿರುತ್ತಾರೆಂದರೆ ಸಾಕ್ಷಿಯು ಬರೆಯುವ ಸಮಯದಲ್ಲಿ ನಾನು ಇರಲಿಲ್ಲ ಎಂದು ಹೇಳುತ್ತಾರೆ. ಪಂಚಾಯ್ತಿ ಯಾವಾ ಸಮಯದಲ್ಲಿ ಆಗಿತ್ತು ಎಂದು ಹೇಳಲು ನನಗೆ ನೆನಪಿರುವುದಿಲ್ಲ. ನಾನು ಪತ್ರವನ್ನು ಯಾರು ಬರೆದಿರುತ್ತಾರೆಂದು ವಿಚಾರ ಮಾಡಿರುವುದಿಲ್ಲ ಅವರು ಓದಿ ಹೇಳಿದ ನಂತರ ಸಹಿ ಮಾಡುವಂತೆ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಯಾರ ಪತ್ರವನ್ನು ಓದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

4. ಪಂಚಾಯ್ತಿಯಲ್ಲಿ ರುದ್ರಪ್ಪನವರ ಅಕ್ಕ ತಂಗಿಯರು ಯಾರು ಭಾಗವಹಿಸಿರುವುದಿಲ್ಲ, ಆದರೆ ದೇವಿರಮ್ಮನವರ ಗಂಡ ರಾಜಪ್ಪನವರು ಪಂಚಾಯ್ತಿಗೆ ಭಾಗವಹಿಸಿದ್ದರು. ರಾಜಪ್ಪನವರು ಪತ್ರಕ್ಕೆ ಸಹಿಯಾಕಿರುತ್ತಾರೋ ಇಲ್ಲವೋ ನಾನು ನೋಡಿರುವುದಿಲ್ಲ. ರುದ್ರಪ್ಪ ಮತ್ತು ಬಸವರಾಜಪ್ಪನವರಿಗೆ ಎಷ್ಟು ಜನ ಸಹೋದರಿಯರು ಇರುತ್ತಾರೆಂದರೆ ಸಾಕ್ಷಿಯು ದೇವಿರಮ್ಮ ಒಬ್ಬರೂ ಮಾತ್ರ ನನಗೆ ಗೊತ್ತಿರುತ್ತಾರೆ ಬೇರೆಯವರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪಂಚಾಯ್ತಿಯಾದ ನಂತರ, ಅವರ ಮನೆಯಲೆ ಪತ್ರ ಬರವಣಿಗೆ ಮಾಡಿರುತ್ತಾರೆ, ನಾನು ಪಂಚಾಯ್ತಿಯಾದನಂತರ ನಾನು ನನ್ನ ಮನೆಗೆ ಹೋಗಿರುತ್ತೇನೆ, ಅವರು ಕರೆದ ನಂತರ ನಾನು ಸಹಿ ಮಾಡಿರುತ್ತೇನೆ. ನಮ್ಮ ಊರಿನಲ್ಲಿ ಯಾವಾ ವಕೀಲರು ಇರುವುದಿಲ್ಲ. ಪಂಚಾಯ್ತಿ ಮಾಡುವ ಸಂದರ್ಭದಲ್ಲಿ 12 ರಿಂದ 15 ಜನರಿದ್ದರು. ಅರದಲ್ಲಿ ವಕೀಲರ್ಯಾರು ನನಗೆ

ಕಾಣಿಸಿರುವುದಿಲ್ಲ. ಪಂಚಾಯ್ತಿಗೆ ಯಾರ್ಯಾರು ಬಂದಿದ್ದರೂ ಅವರೆಲ್ಲರೂ ನನಗೆ ಪರಿಚಯವಿರುತ್ತಾರೆ.

**5.** ರುದ್ರಪ್ಪ ಮತ್ತು ಬಸವರಾಜಪ್ಪನವರ ಸಹಿಗಳನ್ನು ನೋಡಿದರೂ ಸಹ ನನಗೆ ಗುರುತಿಸಲು ಆಗುವುದಿಲ್ಲ. ಪಂಚಾಯ್ತಿಯಲ್ಲಿ ಆದಂತಹ ಪತ್ರವನ್ನು ಯಾವಾ ಪೆನ್ನಿನಲ್ಲಿ ಬರೆದಿರುದ್ದಿರೋ ಎಂದು ನನಗೆ ಗೊತ್ತಿರುವುದಿಲ್ಲ. ಪಂಚಾಯ್ತಿಯಲ್ಲಿ ಆದಂತಹ ಪತ್ರವನ್ನು ಕೈ ಬರವಣಿಗೆಯಲ್ಲಿ ಬರೆದಿರುತ್ತಾರೆ. ದಿಃ 28-08-2013 ರಂದು ನಿಪಿ-11 ರಂತೆ ಪಂಚಾಯ್ತಿ ಪಾರಿಖತ್ತು ಮಾಡಿರುವುದು ಸಂಪೂರ್ಣ ಸುಳ್ಳಿರುತ್ತದೆ ಎಂದರೆ ಸರಿಯಲ್ಲ. ಆ ದಿವಸ ಯಾವುದೇ ಪಂಚಾಯ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯ್ತಿ ಪಾರಿಖತ್ತಿನ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೈ ಬರವಣಿಗೆ ದಾಖಲೆಗೆ ಸಹಿ ಮಾಡಿದ್ದೇನೆ ಎಂದು ಹೇಳಿದ್ದು, ಆದರೆ ನಿಪಿ-11 ಕೈ ಬರವಣಿಗೆಯ ದಾಖಲೆಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಸಹಿ ಮಾತ್ರ ನನ್ನದೇ ಎಂದು ಹೇಳಿರುತ್ತಾರೆ. ಬಸವರಾಜಪ್ಪನವರ ಮಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಪಂಚಾಯ್ತಿಯಾಗಿದೆ ಮತ್ತು ಆ ದಿವಸ ಪಂಚಾಯ್ತಿ ಪಾರಿಖತ್ತಿನ ದಾಖಲೆಗೆ ಸಹಿ ಮಾಡಿರುತ್ತೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂಜುಂಡಪ್ಪನವರ ಅಭಿವೃದ್ದಿಯನ್ನು ಸಹಿಸಲಾಗದೇ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಹಾಗೆ ಒಟ್ಟು ಕುಟುಂಬದಲ್ಲಿ ಯಾವುದೇ ಬರವಣಿಯಾಗಿರುವುದಿಲ್ಲ, ಹಿಸ್ಸೆಯಾಗಿರುವುದಿಲ್ಲ ಮತ್ತು ಪಂಚಾಯ್ತಿಯು ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ